**<u>ದಿನಾಂಕಃ 27.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಎದುರುದಾರರ ಪರ ಶ್ರೀ ಎಲ್.ಎ ವಕೀಲರಿಂದಃ</u>**

1) ನಾನು ಎದುರುದಾರರ ವಿರುದ್ಧ ಅಸಲು ದಾವಾ ಸಂಖ್ಯೆ 81/2020 ರಂತೆ ದಾಖಲಿಸಿದ್ದ ಪ್ರಕರಣದಲ್ಲಿ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆನು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಾಕ್ಷ್ಯ ವಿಚಾರಣೆಗೆ ಪ್ರಕರಣ ನಿಗದಿ ಇದ್ದಾಗ ಪ್ರತಿ ಬಾರಿ ನನ್ನ ವಕೀಲರು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿ. ಈ ಪ್ರಕರಣದ ಅನುಕೂಲತೆಗಾಗಿ ನಾನು ನಿಪಿ.2 ರ ವೈದ್ಯಕೀಯ ಚೀಟಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ರಲ್ಲಿ ತಿಳಿಸಿರುವ ಕ್ಷ-ಕಿರಣ ಪರೀಕ್ಷಾ ವರದಿಯನ್ನು ಹಾಜರುಪಡಿಸುತ್ತೇನೆ. ನಿ.ಪಿ.2 ರಲ್ಲಿ ತಿಳಿಸಿದ ದಿನಾಂಕದ ಪೂರ್ವದಲ್ಲಿ ನಾನು ಚಿಕಿತ್ಸೆ ಪಡೆದಿರುವ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.3 ರ ವೈದ್ಯಕೀಯ ಸಲಹಾ ಚೀಟಿಯಲ್ಲಿ ಚಿಕಿತ್ಸೆ ಪಡೆದ ವ್ಯಕ್ತಿಯ ಹೆಸರು ಮತ್ತು ವಿಳಾಸ ಇಲ್ಲ ಎಂದರೆ ಸರಿ. ಶ್ರೀಮತಿ ಚಂದ್ರಕಲಾ ರವರು ರವರಿಗೆ ವೈರಲ್ ಫೀವರ್ ಆಗಿ ಅವರು ಚಿಕಿತ್ಸೆ ಪಡೆದಿರುವ ಸಂಬಂಧ ಇನ್ನಿತರ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

2) ನಿಪಿ..3 ರಂತೆ ದಾಖಲೆಯನ್ನು ವೈದ್ಯರು ಬರೆಯಲು ಸಾಧ್ಯವಿಲ್ಲ ಮತ್ತು ಪ್ರಕರಣಕ್ಕಾಗಿ ಅಂತಹ ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ..3 ರ ದಾಖಲೆಯನ್ನು ಸರ್ಕಾರಿ ಆಸ್ಪತ್ರೆಯಿಂದ ಪಡೆಯಲಾಗಿದೆ ಎಂದರೆ ಸರಿ. ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದಾದರೂ ವ್ಯಕ್ತಿ ಚಿಕಿತ್ಸೆ ಪಡೆದಲ್ಲಿ ಆ ಸಂಬಂಧ ಆಸ್ಪತ್ರೆಯಲ್ಲಿ ನಿಗದಿತ ನಮೂನೆಯಲ್ಲಿ ದಾಖಲೆಗಳನ್ನು ಇಡುತ್ತಾರೆ ಎಂದರೆ ಸರಿ. ಅಂತಹ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ಹಾಜರುಪಡಿಸಿರುವ ದಾಖಲೆಗಳಲ್ಲಿ ತಿಳಿಸಿದ ದಿನಾಂಕಕ್ಕೂ ಪೂರ್ವದಲ್ಲಿ ಅಸಲು ದಾವಾ ಸಂಖ್ಯೆ 81/2020 ರ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಮೊದಲಿನಿಂದಲೂ ಅನಾರೋಗ್ಯ ಇತ್ತು ಎಂದು ನುಡಿಯುತ್ತಾರೆ. ನಾನು ಈ ಪ್ರಕರಣಕ್ಕೆ ಅನುಕೂಲ ಆಗಲಿ ಎಂಬ ಕಾರಣಕ್ಕೆ ಸುಳ್ಳು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳು ನೈಜತೆಯಿಂದ

ಕೂಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳಿಗೆ ಪೂರಕವಾಗಿ ಇನ್ನಿತರೆ ಅಗತ್ಯ ಇರುವ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೂಲ ಪ್ರಕರಣದಲ್ಲಿ ನ್ಯಾಯಾಲಯವು ನೀಡಿದ್ದ ಸಮಯಾವಕಾಶವನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**